# ಡಾ||ಬಿ.ಅರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ದಾವಣಗೆರೆ ಜಿಲ್ಲೆ

## ದಾವಣಗೆರೆ ಜಿಲ್ಲೆಯಲ್ಲಿ ನಿಗಮವು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಸಂಕ್ಷಿಪ್ತ ಮಾಹಿತಿ:

1. **ಸ್ವಯಂ ಉದ್ಯೋಗ ಯೋಜನೆ**: ಪರಿಶಿಷ್ಟ ಜಾತಿಗೆ ಸೇರಿದ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಬ್ಯಾಂಕುಗಳ ಸಹಯೋಗದೊಂದಿಗೆ ರೂ.50,000ದವರೆಗೆ ಸಾಲ ಸೌಲಭ್ಯ ಒದಗಿಸಲಾಗುವುದು. ಈ ಯೋಜನೆಯಡಿ ನಿಗಮದಿಂದ ಶೇ.50 ಭಾಗ ಅಥವಾ ಗರಿಷ್ಟ ರೂ.10,000/-ಗಳನ್ನು ಸಹಾಯಧನ ರೂಪದಲ್ಲಿ ಮಂಜೂರು ಮಾಡಲಾಗುತ್ತದೆ. ಉಳಿದ ಮೊತ್ತವನ್ನು ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳ ಮೂಲಕ ಸಾಲವನ್ನಾಗಿ ಮಂಜೂರು ಮಾಡಲಾಗುತ್ತದೆ.
2. **ಉಧ್ಯಮ ಶೀಲತಾ ಅಭಿವೃದಿ ಯೋಜನೆ: (ಐ.ಎಸ್.ಬಿ)** ಪರಿಶಿಷ್ಟ ಜಾತಿಗೆ ಸೇರಿದ ನಿರುದ್ಯೋಗಿ ಯುವಕ/ಯುವತಿಯರು ಯಾವುದೇ ಲಾಭದಾಯಕ ಚಟುವಟಿಕೆಗಳನ್ನು ಪ್ರಾರಂಬಿಸಲು ರೂ.50,000 ದಿಂದ ರೂ.10.00 ಲಕ್ಷದವರೆಗೆ ಬ್ಯಾಂಕುಗಳಲ್ಲಿ ಸಾಲ ಮಂಜೂರು ಮಾಡಿದಲ್ಲಿ ನಿಗಮದಿಂದ ಶೇ.20 ಭಾಗ ಅಥವಾ ಗರಿಷ್ಟ ರೂ.1.00ಲಕ್ಷ ಅಂಚಿನ ಹಣ ಮಂಜೂರು ಮಾಡಲಾಗುವುದು. ಉಳಿದ ಶೇ.75 ಭಾಗ ಬ್ಯಾಂಕ್ ಸಾಲ ಮತ್ತು ಶೇ.5 ಭಾಗ ಫಲಾನುಭವಿಯ ಪಾಲು. ರೂ.1.00 ಲಕ್ಷದವರೆಗಿನ ಘಟಕ ವೆಚ್ಚಕ್ಕೆ ಅಂಚಿನ ಹಣದ ಜೊತೆಗೆ ರ.10,000/- ಸಹಾಯಧನ ಒದಗಿಸಲಾಗುವುದು.
3. **ಭೂ ಒಡೆತನ ಯೋಜನೆ:** ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿಗೆ ಸೇರಿದವರಲ್ಲಿ ಬಹುತೇಕ ಭೂ ರಹಿತ ಕೃಷಿ ಕಾರ್ಮಿಕರಾಗಿರುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ವ್ಯಕ್ತಿಯ ಸಾಮಾಜಿಕ ಸ್ಥಾನಮಾನವು ಅವರು ಹೊಂದಿದ ಭೂ ಹಿಡುವಳಿಯ ಮೇಲೆ ಅವಲಂಬಿಸಿರುತ್ತದೆ. ಭೂರಹಿತ ಕೃಷಿ ಕಾರ್ಮಿಕರ ಮಹಿಳೆಯರಿಗೆ ಮಾತ್ರ ಈ ಯೋಜನೆಯಡಿ ಸೌಲಭ್ಯವನ್ನು ನೀಡಲಾಗುತ್ತದೆ. ಫಲಾನುಭವಿಗೆ 2.00 ಎಕರೆ ಖುಷ್ಕಿ ಅಥವಾ 1.00 ಎಕರೆ ತರಿ ಜಮೀನನ್ನು ರೂ.2.50ಲಕ್ಷ ಘಟಕ ವೆಚ್ಚದ ಮಿತಿಯಲ್ಲಿ ನಿಗಮದಿಂದ ಖರೀದಿಸಿ ಮಹಿಳಾ ಫಲಾನುಭವಿಯ ಹೆಸರಿನಲ್ಲಿ ನೋಂದಣಿ ಮಾಡಿಸಲಾಗುವುದು. ಇದರಲ್ಲಿ ಶೇ.50 ಭಾಗ ಸಹಾಯಧನ ಮತ್ತು ಶೇ.50 ಭಾಗ ಸಾಲದ ರೂಪದಲ್ಲಿ ಫಲಾನುಭವಿಯು ಸಾಲದ ಹಣವನ್ನು 10 ವಾರ್ಷಿಕ ಸಮಕಂತುಗಳಲ್ಲಿ ಮರುಪಾವತಿ ಮಾಡಬೇಕು.
4. **ಗಂಗಾ ಕಲ್ಯಾಣ ಯೋಜನೆ:**

ಆ) ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ: ಪರಿಶಿಷ್ಟ ಜಾತಿಗೆ ಸೇರಿದ ಅತಿ ಸಣ್ಣ ರೈತರಿಗೆ ತಮ್ಮ ಜಮೀನಿನಲ್ಲಿ ಕೊಳವೆ ಬಾವಿಯನ್ನು ಕೊರೆಸಿಕೊಳ್ಳಲು ಯೋಜನೆಯನ್ನು ರೂಪಿಸಿದ್ದು ಕನಿಷ್ಟ 2 ಎಕರೆ ಜಮೀನು ಹೊಂದಿದ ಫಲಾನುಭವಿಗಳಿಗೆ ಬಾವಿ ಕೊರೆಸಿ, ಪಂಪ್ ಸೆಟ್ ಅಳವಡಿಸಿ, ವಿದ್ಯುದ್ದೀಕರಣಗೊಳಿಸಲಾಗುವುದು. ಘಟಕ ವೆಚ್ಚ ರೂ.1,00,000/- ಇದ್ದು ಇದರಲ್ಲಿ ರೂ.86,000/- ಸಹಾಯಧನವಿದ್ದು ಉಳಿದ ರೂ.14,000/-ಗಳನ್ನು ಫಲಾನುಭವಿಯು ಶೇ.6ರ ಬಡ್ಡಿ ದರದಲ್ಲಿ ಸಾಲದ ರೂಪದಲ್ಲಿ ಭರಿಸಬೇಕು. ಒಂದು ವೇಳೆ ಘಟಕ ವೆಚ್ಚ ರೂ.1,00,000/- ಗಳಿಗೆ ಮೀರಿದ್ದಲ್ಲಿ ಫಲಾನುಭವಿಯು ಪಂಪು ಅಳವಡಿಸುವ ಸಂದರ್ಭದಲ್ಲಿ ನಿಗಮಕ್ಕೆ ಹೆಚ್ಚುವರಿ ಹಣವನ್ನು ಪಾವತಿಸತಕ್ಕದ್ದು. ಸಾಲದ ಹಣವನ್ನು ಪಾವತಿಸತಕ್ಕದ್ದು. ಸಾಲದ ಹಣವನ್ನು ನಾಲ್ಕು ವರ್ಷಗಳಲ್ಲಿ ಪ್ರತಿ 6 ತಿಂಗಳಿಗೊಮ್ಮೆ 8 ಸಮ ಕಂತುಗಳಲ್ಲಿ ನಿಗಮಕ್ಕೆ ಕಂತಿನ ಪ್ರಕಾರ ಸಾಲ ಮರುಪಾವತಿ ಮಾಡಬೇಕು. 2010-11ನೇ ಸಾಲಿನಿಂದ ಘಟಕ ವೆಚ್ಚದ ಮಿತಿಯನ್ನು ರೂ.1.50 ಲಕ್ಷಗಳಿಗೆ ಹೆಚ್ಚಿಸಿದ್ದು, ಇದರಲ್ಲಿ ಸಹಾಯಧನ ರೂ.1,00,000/- ಗಳಾಗಿದ್ದು ಉಳಿದ ಮೊಬಲಗು ಅವಧಿ ಸಾಲವಾಗಿರುತ್ತದೆ.

..2ಕ್ಕೆ

5. **<u>ನೇರ ಸಾಲ ಯೋಜನೆ:</u>** ಘಟಕ ವೆಚ್ಚ ರೂ.35,000 ದಿಂದ ರೂ.10.00ಲಕ್ಷ ದವರೆಗೆ ಇರುತ್ತದೆ ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ನವದೆಹಲಿ, ಇವರ ಸಹಯೋಗದೊಂದಿಗೆ ಸಾಲ ಸೌಲಭ್ಯ ಮಂಜೂರು ಮಾಡಲಾಗುವುದು. ಸದರಿ ಯೋಜನೆಯಡಿ ಸಣ್ಣ ಕೈಗಾರಿಕೆ, ಹಾಗೂ ವಾಹನದ ಉದ್ದೇಶಗಳಿಗೆ ಸಾಲ ಸೌಲಭ್ಯ ಕಲ್ಪಿಸಲಾಗುವುದು.
6. **ಮೈಕ್ರೋ ಕ್ರೆಡಿಟ್ ಫೈನಾನ್ಸ್ (ಕಿರುಸಾಲ):** ಸದರಿ ಯೋಜನೆಯಡಿ ಪರಿಶಿಷ್ಟ ಜಾತಿಯ ಸ್ತ್ರೀ ಶಕ್ತಿ ಸ್ವ ಸಹಾಯ ಸಂಘಗಳಿಗೆ ಸದರಿ ಸಂಘದ ಸದಸ್ಯರು ಸ್ವಯಂ ಉದ್ಯೋಗ ಕೈಗೊಳ್ಳಲು ಅಥವಾ ಸಂಘದ ಗುಂಪು ಚಟುವಟಿಕೆಗಳಿಗೆ ಪ್ರತಿ ಫಲಾನುಭವಿಗೆ ರೂ.5000/– ಸಹಾಯಧನ ಹಾಗು ರೂ.5000/– ಸಾಲವನ್ನು ಮಂಜೂರು ಮಾಡಲಾಗುವುದು. ಈ ಸಾಲದ ಮೊತ್ತಕ್ಕೆ ಶೇ.4ರಷ್ಟು ಬಡ್ಡಿ ವಿಧಿಸಲಾಗುವುದು. ಸಾಲದ ಮೊತ್ತವನ್ನು 36 ತಿಂಗಳ ಅವಧಿಯೊಳಗೆ ತ್ರೈಮಾಸಿಕ ಕಂತುಗಳಲ್ಲಿ ನಿಗಮಕ್ಕೆ ಮರುಪಾವತಿ ಮಾಡಬೇಕಿರುತ್ತದೆ.

7. **ಮೈಕ್ರೋ ಕ್ರೆಡಿಟ್ ಫೈನಾನ್ಸ್** II: ಸದರಿ ಯೋಜನೆಯಡಿ ಪರಿಶಿಷ್ಟ ಜಾತಿಯ ಸ್ತ್ರೀ ಶಕ್ತಿ ಸ್ವ ಸಹಾಯ ಸಂಘಗಳಿಗೆ ಸದರಿ ಸಂಘದ ಸದಸ್ಯರು ಸ್ವಯಂ ಉದ್ಯೋಗ ಕೈಗೊಳ್ಳಲು ಅಥವಾ ಸಂಘದ ಗುಂಪು ಚಟುವಟಿಕೆಗಳಿಗೆ ಪ್ರತಿ ಫಲಾನುಭವಿಗೆ ರೂ.2,000/– ಸಹಾಯಧನ ಹಾಗು ರೂ.8,000/– ಸಾಲವನ್ನು ಮಂಜೂರು ಮಾಡಲಾಗುವುದು. ಈ ಸಾಲದ ಮೊತ್ತಕ್ಕೆ ಶೇ.5ರಷ್ಟು ಬಡ್ಡಿ ವಿಧಿಸಲಾಗುವುದು. ಸಾಲದ ಮೊತ್ತವನ್ನು 36 ತಿಂಗಳ ಅವಧಿಯೊಳಗೆ ತ್ರೈಮಾಸಿಕ ಕಂತುಗಳಲ್ಲಿ ನಿಗಮಕ್ಕೆ ಮರುಪಾವತಿ ಮಾಡಬೇಕಿರುತ್ತದೆ.

**ಸರ್ಕಾರಿ ಆದೇಶ ಸಂಖ್ಯೆ:ಸಕಇ 221 ಬಿಸಿಎ 2008 ಬೆಂಗಳೂರು, ದಿನಾಂಕ: 02.01.2009 ರ ಆದೇಶದಂತೆ ವಿವಿಧ ಯೋಜನೆಗಳನ್ನು ನಿಗಮವು ಅನುಷ್ಠಾನಗೊಳಿಸಲು ಆಯ್ಕೆ ಸಮಿತಿಯನ್ನು ನೇಮಿಸಿದ್ದು, ಆಯ್ಕೆ ಸಮಿತಿಯನ್ನು ಆಯಾ ಆಯಾ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರು ಅಧ್ಯಕ್ಷರಾಗಿದ್ದು, ಉಳಿದಂತೆ ತಾಲ್ಲೂಕಿನ ಖಾಯಂ ಆಗಿ ವಾಸಿಸುತ್ತಿರುವ ವಿಧಾನ ಪರಿಷತ್ ಸದಸ್ಯರು, ತಾಲ್ಲೂಕು ನಿರ್ವಾಹಕ ಅಧಿಕಾರಿಗಳು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸಹಾಯಕ ಕಾರ್ಯಪಾಲಕ ಅಭಿಯಂತರರು,ಕರ್ನಾಟಕ ವಿದ್ಯುತ್ ಮಂಡಳಿ, ತಾಲ್ಲೂಕು ಸಹಾಯಕ ನಿರ್ದೇಶಕರು, ಕೈಗಾರಿಕಾ ಇಲಾಖೆ, ಸಂಬಂಧಿಸಿದ ತಾಲ್ಲೂಕಿನ ತಹಶೀಲ್ದಾರರು, ತಾಲ್ಲೂಕಿನ ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ, ತಾಲ್ಲೂಕಿನ ಸಹಾಯಕ ನಿರ್ದೇಶಕರು,ತೋಟಗಾರಿಕೆ ಇಲಾಖೆ, ಸಂಬಂಧಿಸಿದ ಜಿಲ್ಲೆಯ ಅರಣ್ಯ ಅಧಿಕಾರಿಗಳು, ಹಿಂದಳಿದ ವರ್ಗಗಳ ಇಲಾಖೆಯ ನಿರೀಕ್ಷಕರು, ಇವರುಗಳು ಸದಸ್ಯರುಗಳಾಗಿದ್ದು, ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.**

**ಜಿಲ್ಲಾ ವ್ಯವಸ್ಥಾಪಕರು**
**ದಾವಣಗೆರೆ.**